ಶ್ರೀ ಸಿದ್ದು ಸಾವದಿ (ಜಮಖಂಡಿ)146(317)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಹನ್ನೆರಡನೆಯ ಹಣಕಾಸು ಯೋಜನೆಯ ಮತ್ತು ಮುಖ್ಯಮಂತ್ರಿ ಗ್ರಾಮ ಸಡಕ್ ಯೋಜನೆಗಳಲ್ಲಿ ಯಾವ ಯಾವ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುವುದು,

ಆ) ಈ ರಸ್ತೆಗಳನ್ನು ಯಾವ ರೀತಿ ಅಭಿವೃದ್ಧಿಪಡಿಸಲಾಗುವುದು,

ಇ) ಜಮಖಂಡಿ ತಾಲ್ಲೂಕಿನಲ್ಲಿ ಎರಡೂ ಯೋಜನೆಗಳ ಹಣವನ್ನು ತಾಲ್ಲೂಕಿನಲ್ಲಿ ಇದ್ದ ಬಹುತೇಕ ರಸ್ತೆಗಳಲ್ಲಿ ಅರ್ಧ ಕಿಲೋ ಮೀಟರ್ ಅಥವಾ ಒಂದು ಕಿಲೋ ಮೀಟರ್ ರಸ್ತೆಗಳನ್ನು ಆಯ್ಕೆ ಮಾಡಿದ್ದರಿಂದ ಯಾವ ಒಂದೂ ರಸ್ತೆಗಳು ಪೂರ್ತಿ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ, ನಿಯಮ ಬಾಹಿರವಾಗಿ ತಯಾರಿಸಿದ ಕ್ರಿಯಾ ಯೋಜನೆಯ ಮೇಲೆ ಏನು ಕ್ರಮ ಜರುಗಿಸಲಾಗುವುದು?

ಶ್ರೀ ಸಿ ಎಂ ಉದಾಸಿ

ಅ) 2007-08ನೇ ಸಾಲಿನಲ್ಲಿ 12ನೇ ಹಣಕಾಸು ಆಯೋಗ ಯೋಜನೆ ಮತ್ತು ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ [೨](ಲೆಕ್ಕಶೀರ್ಷಿಕೆ-3054) ಯಡಿ ಒದಗಿಸಲಾದ ಅನುದಾನದಲ್ಲಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಜಲ್ಲಿ ಮೇಲ್ಪೈ ಹೊಂದಿರುವ ಹಾಗೂ ಡಾಂಬರು ಗ್ರಾಮೀಣ ರಸ್ತೆಗಳ ನಿರ್ವಹಣೆಯನ್ನು ಕೈಗೊಳ್ಳಲಾಗುವುದುಆ) ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ (ಲೆಕ್ಕಶೀರ್ಷಿಕೆ-3054) ಮತ್ತು 12ನೇ ಹಣಕಾಸು ಆಯೋಗದ ಶಿಫಾರಸ್ಸಿನಡಿ ಒದಗಿಸಲಾದ ಅನುದಾನದಲ್ಲಿ ಶೇಕಡಾ10ರಷ್ಟು ಡಾಂಬರೀಕರಣಗೊಂಡ ರಸ್ತೆಗಳನ್ನು ಮತ್ತು ಶೇಕಡ 20ರಷ್ಟು ಜಲ್ಲಿ ರಸ್ತೆಗಳನ್ನು ನಿರ್ವಹಣೆ ಮಾಡಲಾಗುವುದು

ಇ) ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಪ್ರಕಾರ ಜಿಲ್ಲಾ ಪಂಚಾಯತಿಗೆ ಒದಗಿಸಲಾದ ಅನುದಾನಕ್ಕನುಗುಣವಾಗಿ ತುರ್ತು ಮತ್ತು ಅಗತ್ಯವಿರುವ ರಸ್ತೆ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಜಿಲ್ಲಾ ಪಂಚಾಯತಿಗಳು ತಯಾರಿಸಿ ಸಾಮಾನ್ಯ ಸ್ಥಾಯಿ ಸಮಿತಿ ಅನುಮೋದನೆ ಪಡೆಯಲಾಗುತ್ತಿದ್ದು, ನಿಯಮಾನುಸಾರ ಕಾಮಗಾರಿಗಳನ್ನು ಅನುಷ್ಠಾನ ಗೊಳಿಸಲಾಗುತ್ತಿದೆ

ಶ್ರೀ ಸಿದ್ದು ಸಾವದಿ (ಜಮಖಂಡಿ)147(318)

ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿ ವೈಯಕ್ತಿಕವಾಗಿ ಕಟ್ಟಿಸಿಕೊಂಡ ಶೌಚಾಲಯಗಳ ಸಂಖ್ಯೆ ಎಷ್ಟು ಮತ್ತು ಅವುಗಳಿಗೆ ಒದಗಿಸುವ ಸಹಾಯಧನ ಎಷ್ಟು,

ಆ) ಸಹಾಯದನ ಪಡೆದ ಎಲ್ಲಾ ಶೌಚಾಲಯಗಳನ್ನು ಉಪಯೋಗಿ ಸುತ್ತಾರೆಯೇ ಇಲ್ಲವಾದಲ್ಲಿ ಕಾರಣಗಳೇನು,

ಇ) ಕೇವಲ ರೂ 1200/– ಹಣದ ಸಹಾಯಧನದಲ್ಲಿ ಅಷ್ಟೊಂದು ಜನಾಕರ್ಷಣೆ ಇಲ್ಲದಿರುವುದರಿಂದ ಪೂರ್ಣವಾಗಿ ಸರ್ಕಾರವೇ ಮನೆ ಗೊಂದು ಶೌಚಾಲಯವನ್ನು ಏಕೆ ಕಟ್ಟಿಸಿಕೊಡಬಾರದು

ಈ) ಕನಿಷ್ಟ ಪಕ್ಷ ಬಡತನ ರೇಖೆಗಿಂತ ಕೆಳಗಿರುವ ಬಡವರಿಗಾದರೂ ಉಚಿತವಾಗಿ ವೈಯಕ್ತಿಕ ಶೌಚಾಲಯಗಳನ್ನು ಕಟ್ಟಿಸಿಕೊಡುವ ಯೋಚನೆ ಇದೆಯೇ ಇಲ್ಲವಾದಲ್ಲಿ ಕಾರಣಗಳನ್ನು ತಿಳಿಸುವುದು

ಶ್ರೀ ಎಸ್ ಎ ರವೀಂದ್ರನಾಥ್

ಅ) ರಾಜ್ಯದಲ್ಲಿ ಈವರೆಗೆ ಸಂಪೂರ್ಣ ಸ್ವಚ್ಛತಾ ಆಂದೋಲನ ದಡಿಯಲ್ಲಿ 752228 ಕುಟುಂಬಗಳು ಶೌಚಾಲಯವನ್ನು ನಿರ್ಮಿಸಿಕೊಂಡು